# ಪೊನ್ನಂಪೇಟೆಯಲ್ಲಿ ಶ್ರೀರಾಮಕೃಷ್ಣರಿಗೆ ಅರ್ಪಿತವಾದ ನೂತನ ವಿಶ್ವಭಾವೈಕ್ಯ ಮಂದಿರದ ಉದ್ಘಾಟನೆ



ವಿದ್ಯುದ್ದೀಪದ ಬೆಳಕಿನಲ್ಲಿ ಬೆಳಗುತ್ತಿರುವ ನೂತನ ದೇವಮಂದಿರ

**ಕ**ರ್ನಾಟಕದ ರಾಮಕೃಷ್ಣ ಆಂದೋಲನದ ಇತಿಹಾಸದಲ್ಲಿಯೇ ಸ್ಮರಣೀಯವಾದ ಸಮಾರಂಭವು ಸುಂದರ ಪ್ರಕೃತಿಯ ತವರೂರಾದ ಕೊಡಗಿನ ಪೊನ್ನಂಪೇಟೆಯಲ್ಲಿ ಇದೇ ಅಕ್ಟೋಬರ್ ೨೬ ರಿಂದ ೨೮ ರವರೆಗೆ ಜರುಗಿತು. ೮೨ ವರ್ಷ ಹಳೆಯದಾದ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಂಗಣದಲ್ಲಿ ನೂತನವಾಗಿ ನಿರ್ಮಾಣಗೊಂಡ, ಶ್ರೀರಾಮಕೃಷ್ಣರಿಗೆ ಸಮರ್ಪಿತವಾದ ಭವ್ಯ ವಿಶ್ವಭಾವೈಕ್ಯ ದೇವಮಂದಿರದ ಉದ್ಘಾಟನಾ ಸಮಾರಂಭವು ಆ ದಿನಗಳಂದು ನಡೆಯಿತು.

ದಿನಾಂಕ ೨೬.೧೦.೨೦೦೯ ರಂದು ಜರುಗಿದ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ರಥಯಾತ್ರೆಯ ನೇತೃತ್ವವನ್ನು ವಹಿಸಿದ್ದವರು ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು. ೨೭.೧೦.೨೦೦೯ ರಂದು ಪ್ರಾತಃಕಾಲ ದೇಶವಿದೇಶಗಳಿಂದ ಬಂದಿದ್ದ ೧೮೦ ಸಾಧುಬ್ರಹ್ಮಚಾರಿಗಳು ಮತ್ತು ೩೦೦೦ ಕ್ಕೂ ಹೆಚ್ಚು ಭಕ್ತರು ನೂತನ ದೇಗುಲದ ಪರಿಕ್ರಮದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಪರಮಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಇದರ ನೇತೃತ್ವವನ್ನು ವಹಿಸಿದ್ದರು. ವೇದಪಾರಾಯಣ, ಭಜನೆಗಳು, ಭಕ್ತಿಗೀತೆಗಳು ಹಾಗೂ ನೆರೆದ ಸಾಧುಗಳು ಮತ್ತು ಭಕ್ತರಿಂದ ಆಹ್ಲಾದಕಾರಿ ಸಂಕೀರ್ತನ–ನರ್ತನ ಈ ಶೋಭಾಯಾತ್ರೆಯ ಮುಖ್ಯ ಆಕರ್ಷಣೆಗಳಾಗಿದ್ದವು.

ತದನಂತರ, ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು, ಶ್ರೀರಾಮಕೃಷ್ಣರ ಪುಣ್ಯಪ್ರತಿಮೆಗೆ ಪೂಜೆಯನ್ನು ಸಮರ್ಪಿಸಿ, ನೂತನ ದೇವಾಲಯವನ್ನು ಮಾನವತೆಗೆ ಸಮರ್ಪಿಸಿದರು. ಈ ಸಂದರ್ಭದಲ್ಲಿ ವಿಶೇಷವಾಗಿ ಏರ್ಪಡಿಸಲಾಗಿದ್ದ ವೇದಪಾಠ, ಹೋಮ, ದುರ್ಗಾಸಪ್ತಶತೀ ಪಾರಾಯಣ ಮತ್ತು ಭಜನೆಗಳು ಇಡೀ ಪರಿಸರವನ್ನು ಆಧ್ಯಾತ್ಮಿಕ ಭಾವದಿಂದ ತುಂಬಿ ತುಳುಕುವಂತೆ ಮಾಡಿದ್ದವು. ಉತ್ತರಕನ್ನಡ ಜಿಲ್ಲೆಯ ಶಿರಸಿಯಿಂದ ಆಗಮಿಸಿದ್ದ, ನಿಷ್ಣಾತರಾದ ಋತ್ವಿಕರು ೨೫.೧೦.೨೦೦೯ ಮತ್ತು ೨೬.೧೦.೨೦೦೯ – ಈ ಎರಡೂ ದಿನಗಳಂದು ವಾಸ್ತುಹೋಮ, ಗಣಪತಿಹೋಮ ಮತ್ತು ದುರ್ಗಾಹೋಮಗಳನ್ನು ಆಚರಿಸಿದರು.




ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜರ ಆಗಮನ

ಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಈ ಸಂದರ್ಭದಲ್ಲಿ ಹೊರತರಲಾದ ವರ್ಣರಂಜಿತ ಸ್ಮರಣಸಂಚಿಕೆಯನ್ನು ದಿನಾಂಕ ೨೬.೧೦.೨೦೦೯ ರ ಸಂಜೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ಬಿಡುಗಡೆ ಮಾಡಿದರು. ಇದು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳ ಆಶೀರ್ವಚನಗಳು, ದಿವ್ಯತ್ರಯರ ಜೀವನ ಸಂದೇಶ ಮತ್ತು ವೇದಾಂತದ ಬಗೆಗಿನ ಉತ್ತಮ ಲೇಖನಗಳ ಸಂಕಲನವಾಗಿದೆ.



ನೂತನ ದೇವಾಲಯದಲ್ಲಿ ಶ್ರೀರಾಮಕೃಷ್ಣರ ಪುಣ್ಯಮೂರ್ತಿಗೆ ಸಂಧ್ಯಾರತಿಯ ಆರಾಧನೆ

ಎಲ್ಲ ಮೂರು ದಿನಗಳಂದೂ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹೆಸರಾಂತ ಗಾಯಕ ಸಿ. ಅಶ್ವಥ್, ಪ್ರಸಿದ್ಧ ಭಾಷಣಕಾರರಾದ ಸೂಲಿಬೆಲೆ ಚಕ್ರವರ್ತಿ ಮತ್ತು ವಿಖ್ಯಾತ ಹರಿಕಥಾ ವಿದ್ವಾಂಸರಾದ ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು ಈ ಕಾರ್ಯಕ್ರಮಗಳನ್ನು ಅತ್ಯಂತ ಸಮರ್ಥವಾಗಿ ನಡೆಸಿಕೊಟ್ಟರು. ೨೮.೧೦.೨೦೦೯ ರ ಸಂಜೆ  ಮಹಾಭಾರತದ ವಸ್ತುವಿಷಯವನ್ನು ಆಧರಿಸಿದ ಯಕ್ಷಗಾನ ಕಾರ್ಯಕ್ರಮವು ನೆರೆದಿದ್ದ ಸಾಧು–ಭಕ್ತ ವೃಂದದ ಮನಸೆಳೆಯಿತು.

ಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ೨೬.೧೦.೨೦೦೯ ರ ಉದ್ಘಾಟನಾ ಸಮಾರಂಭ ಹಾಗೂ ೨೮.೧೦.೨೦೦೯ ರಂದು ಜರುಗಿದ ಸಮಾರೋಪ ಸಮಾರಂಭಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ೨೭.೧೦.೨೦೦೯ ರ ಬೆಳಗ್ಗೆ ನಡೆದ ಸಮಾರಂಭದ ಅಧ್ಯಕ್ಷತೆಯನ್ನೂ, ಸ್ವಾಮಿ ಗೌತಮಾನಂದಜಿ ಅವರು ಅದೇ ದಿನ ಸಂಜೆ ನಡೆದ ಸಮಾರಂಭದ ಅಧ್ಯಕ್ಷತೆಯನ್ನೂ ವಹಿಸಿದ್ದರು.

ಅನೇಕ ಸ್ಥಳೀಯ ಕಲಾಕಾರರು ವೇದಿಕೆಯ ಮೇಲೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಕೊಡವ ಪಂಗಡಕ್ಕೆ ಸೇರಿದ ಹಲವಾರು ಸ್ತ್ರೀಪುರುಷರು ತಮ್ಮ ಸಾಂಪ್ರದಾಯಿಕ ಉಡುಪಿನಲ್ಲಿ ಅಕ್ಟೋಬರ್ ೨೫ ರಂದು ಪರಮಾಧ್ಯಕ್ಷರನ್ನು ಸ್ವಾಗತಿಸಿದರು. ಹಾಗೆಯೇ ಅಕ್ಟೋಬರ್ ೨೬ ರಂದು ನಡೆದ ಭವ್ಯ ರಥಯಾತ್ರೆಯಲ್ಲೂ ಭಾಗವಹಿಸಿದ್ದರು.




ಭವ್ಯ ರಥಯಾತ್ರೆಯ ಮನೋಹರ ದೃಶ್ಯ

ಪರಮಪೂಜ್ಯ ಪರಮಾಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಶೀರ್ವಚನಗಳು ನೆರೆದಿದ್ದ ಸಾವಿರಾರು ಆಧ್ಯಾತ್ಮಿಕ ಸಾಧಕರು ಮತ್ತು ಭಕ್ತರಿಗೆ ಅನುಗ್ರಹದಾಯಕಗಳಾಗಿ ಪರಿಣಮಿಸಿದವು. ಮಂದಿರದ ನಿರ್ಮಾಣದಲ್ಲಿ ಸಹಕರಿಸಿದ ಕಲಾವಿದರು, ತಂತ್ರಜ್ಞರು ಮತ್ತು ಉದಾರದಾನಿಗಳನ್ನು ಇದೇ ಸಂದರ್ಭದಲ್ಲಿ ಸತ್ಕರಿಸಲಾಯಿತು.

೨೮.೧೦.೨೦೦೯ ರಂದು ೧೦೦೦ಕ್ಕೂ ಹೆಚ್ಚು ಕೊಡವ ಆದಿವಾಸಿಗಳಿಗೆ ಕೊಡುಗೆಗಳನ್ನು ನೀಡುವ ಮೂಲಕ 'ನಾರಾಯಣಸೇವೆ' ಯನ್ನು ನಡೆಸಲಾಯಿತು. ಅಂದಿನ ದಿನವೇ ನಡೆದ ಯುವಸಮಾವೇಶದಲ್ಲಿ ಹತ್ತಿರದ ಕಾಲೇಜುಗಳ ಯುವ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ವರಿಷ್ಠ ಸಂನ್ಯಾಸಿಗಳು ಅವರಿಗೆ ವ್ಯಕ್ತಿತ್ವ ವಿಕಸನದ ಬಗ್ಗೆ  ಮಾರ್ಗದರ್ಶನ ಮಾಡಿದರು.

ಹೊರಗಿನಿಂದ ಬಂದಿದ್ದ ೧೫೦೦ ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ಸ್ವಯಂಸೇವಕರಿಗೆ ಹತ್ತಿರದ  ಹಲವು ಶಾಲೆಗಳಲ್ಲಿ ವಸತಿಯ ಏರ್ಪಾಡನ್ನು ಮಾಡಲಾಗಿತ್ತು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ಜಗದಾತ್ಮಾನಂದಜಿ ಅವರ ಮಾರ್ಗದರ್ಶನದಲ್ಲಿ ಎಲ್ಲವೂ ಅಚ್ಚುಕಟ್ಟಾಗಿ ನಡೆಯಿತು. ಒಬ್ಬ ಸ್ಥಳೀಯ ಹಿರಿಯರು ಹೀಗೆ ಉದ್ಗರಿಸಿದರು: **"ನಾನೆಂದೂ ನನ್ನ ಇಡೀ ಜೀವನದಲ್ಲಿ ಇಂತಹ ಭವ್ಯ ಸಮಾರಂಭವು ಪೊನ್ನಂಪೇಟೆಯಲ್ಲಿ ಜರುಗಿದ್ದನ್ನು ಕಂಡಿರಲಿಲ್ಲ."** ಇದು ಶ್ರೀರಾಮಕೃಷ್ಣರ ಕೃಪಾಶೀರ್ವಾದಕ್ಕೆ ಪ್ರತ್ಯಕ್ಷಸಾಕ್ಷಿಯಲ್ಲದೆ ಮತ್ತಿನ್ನೇನು?

# ನೆರೆಪೀಡಿತ ಉತ್ತರಕರ್ನಾಟಕದಲ್ಲಿ ರಾಮಕೃಷ್ಣ ಮಿಷನ್ನಿನ ಪರಿಹಾರ ಕಾರ್ಯ

ಇತ್ತೀಚೆಗೆ ಸುರಿದ ಭಾರೀ ಮಳೆ ಮತ್ತು ಪ್ರವಾಹದಿಂದಾಗಿ ಸಂತ್ರಸ್ತರಾದ ಉತ್ತರ ಕರ್ನಾಟಕದ ಜನತೆಯ ಸಹಾಯಕ್ಕಾಗಿ ರಾಮಕೃಷ್ಣ ಮಿಷನ್ ಮುಂದಾಗಿದೆ. ಇದರ ಮೈಸೂರು ಮತ್ತು ಬೆಳಗಾವಿ ಆಶ್ರಮಗಳ ಮೂಲಕ, ಆರು ಜಿಲ್ಲೆಗಳಲ್ಲಿ ಪರಿಹಾರ ಕಾರ್ಯವನ್ನು ಈಗಾಗಲೇ ನಡೆಸಲಾಗಿದೆ.

ಬೆಳಗಾವಿ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಮತ್ತು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಅಕ್ಟೋಬರ್ ೬ ರಿಂದ ೧೧ ರವರೆಗೆ ಕೊಪ್ಪಳ, ಸಿರುಗುಪ್ಪ ಮತ್ತು ಮುಧೋಳ್ ಪ್ರದೇಶಗಳಲ್ಲಿ ಅತ್ಯಂತ ತೀವ್ರವಾಗಿ ಹಾನಿಗೊಳಗಾಗಿರುವ ಹಳ್ಳಿಗಳಲ್ಲಿ ಸರ್ವೇಕ್ಷಣಾ ಕಾರ್ಯವನ್ನು ನಡೆಸಿದರು.

ಇದೇ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೋಕಿನ ಮಾಟೂರು ಗ್ರಾಮದಲ್ಲಿ ವಸತಿಯಿಲ್ಲದೆ ರಸ್ತೆಯಲ್ಲಿ ಬೀಡುಬಿಟ್ಟಿದ್ದ ೧೫೦ ಕುಟುಂಬಗಳಿಗೆ, ತಾತ್ಕಾಲಿಕವಾಗಿ ಟೆಂಟ್ ಕಟ್ಟಿಕೊಳ್ಳಲು, ೪೦,೦೦೦ ರೂಪಾಯಿ ಮೌಲ್ಯದ ಟಾರ್ಪಾಲಿನ್‌ಗಳನ್ನು ಒದಗಿಸಲಾಯಿತು. ಅದಲ್ಲದೆ, ಪ್ರತಿ ಕುಟುಂಬಕ್ಕೂ ೩೫೦ ರೂಪಾಯಿಗಳ ಮೌಲ್ಯದ ಪಾತ್ರೆಗಳನ್ನು ವಿತರಿಸಲಾಯಿತು. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೋಕಿನ ಬೀರನಗದ್ದಿ ಗ್ರಾಮದಲ್ಲಿ ೧೧೦ ಸಂತ್ರಸ್ತರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.

ಪರಿಹಾರ ಕಾರ್ಯದ ಎರಡನೆಯ ಹಂತದಲ್ಲಿ, ದಿನಾಂಕ ೨೦.೧೦.೨೦೦೯ರಿಂದ ೨೯.೧೦.೨೦೦೯ ರವರೆಗೆ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿಗಳು, ಬ್ರಹ್ಮಚಾರಿಗಳು ಮತ್ತು ಸ್ವಯಂಸೇವಕರನ್ನು ಒಳಗೊಂಡ ತಂಡವು ಬಳ್ಳಾರಿ, ರಾಯಚೂರು, ಕೊಪ್ಪಳ, ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ಪ್ರವಾಸ ಮಾಡಿ, ಪ್ರವಾಹ ಮತ್ತು ಭಾರೀ ಮಳೆಯಿಂದ ಸಂತ್ರಸ್ತರಾದ ಜನರಿಗೆ ಪರಿಹಾರವನ್ನು ಒದಗಿಸಿತು.

ಬಳ್ಳಾರಿ ಜಿಲ್ಲೆಯ ಮಾಟೂರು, ಶ್ರೀಧರಗಡ್ಡ ಮತ್ತು ಬಳ್ಳಾರಿ ನಗರದ ಕೊಳಚೆಪ್ರದೇಶಗಳಲ್ಲಿ ವಾಸಿಸುತ್ತಿರುವ, ೨೭೩ ಕುಟುಂಬಗಳಿಗೆ ಕಂಬಳಿಗಳು, ಗೋಧಿಹಿಟ್ಟು, ತಾಳೆ ಎಣ್ಣೆ, ಸಕ್ಕರೆ, ಚಹಾಪುಡಿ, ಹಾಲಿನಪುಡಿಗಳನ್ನು ಹಂಚಲಾಗಿದೆ.

ರಾಯಚೂರು ಜಿಲ್ಲೆಯ ಒಳಬಳ್ಳಾರಿ ಎಂಬ ಗ್ರಾಮದಲ್ಲಿ ಭಾರೀ ಮಳೆಯಿಂದ ಬಹುತೇಕ ಮನೆಗಳು ಕುಸಿದುಬಿದ್ದಿದ್ದು, ಅಲ್ಲಿನ ೫೦೦ ಕುಟುಂಬಗಳಿಗೆ ಮೇಲೆ ಉಲ್ಲೇಖಿಸಿದ ಪರಿಹಾರ ಸಾಮಗ್ರಿಗಳನ್ನು ನೀಡಲಾಯಿತು.

ಕೊಪ್ಪಳ ಜಿಲ್ಲೆಯ ವಕ್ಕನದುರ್ಗ, ರಾಮಪುರ ಮತ್ತು ಭಾಗ್ಯನಗರ (ಕೊಪ್ಪಳ) ಗ್ರಾಮಗಳಲ್ಲಿ ಒಟ್ಟು ೪೭೫ ಕುಟುಂಬಗಳಿಗೆ ಕಂಬಳಿಗಳು, ಜೋಳ, ತಾಳೆ ಎಣ್ಣೆ ಮತ್ತು ಕಡಲೆಬೇಳೆಗಳನ್ನು ವಿತರಿಸಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ, ಸ್ವಯಂಸೇವಾ ಸಂಸ್ಥೆಗಳ ಮೂಲಕ ಹಲವಾರು ಹಳ್ಳಿಗಳಲ್ಲಿ ೧೧೦೦೦ ಕಂಬಳಿಗಳನ್ನು ವಿತರಿಸಲಾಗಿದೆ. ಅದಲ್ಲದೆ, ಆ ಜಿಲ್ಲೆಯ ಸಿಂಧಗಿ ತಾಲೋಕಿನ ೧೨೬ ಕುಟುಂಬಗಳಿಗೆ ಪಾತ್ರೆಗಳನ್ನು ನೀಡಲಾಗಿದೆ ಮತ್ತು ಮೂರು ನಿರಾಶ್ರಿತ ಕುಟುಂಬಗಳಿಗೆ ಆಹಾರ ಪದಾರ್ಥಗಳನ್ನು ಒದಗಿಸಲಾಗಿದೆ.

ಗುಲ್ಬರ್ಗ ಜಿಲ್ಲೆಯ ಅಫ್‌ಜಲ್‌ಪುರ ತಾಲ್ಲೂಕಿನ ಅಳಗಿ, ಹಿಂಚಗೇರಾ ಮತ್ತು ಮಾಶಾಳಾ ಗ್ರಾಮಗಳಿಗೆ ಸೇರಿದ ೨೮೪ ಕುಟುಂಬಗಳಿಗೆ ಗೃಹೋಪಯೋಗಿ ಪಾತ್ರೆಗಳನ್ನು ಮತ್ತು ಕಂಬಳಿಗಳನ್ನು ವಿತರಿಸಲಾಯಿತು.

ಈ ಎರಡನೆಯ ಹಂತದಲ್ಲಿ, ೫ ಜಿಲ್ಲೆಗಳ ೨೦ ಕ್ಕೂ ಹೆಚ್ಚು ಗ್ರಾಮಗಳಲ್ಲಿ ವಾಸಿಸುತ್ತಿರುವ ಸುಮಾರು ೨೬೦೦ ಕುಟುಂಬಗಳಿಗೆ ರಾಮಕೃಷ್ಣ ಮಿಷನ್ನಿನ ವತಿಯಿಂದ ಪರಿಹಾರವನ್ನು ನೀಡಲಾಗಿದೆ. ಕಂಬಳಿಗಳನ್ನು ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರದಿಂದ ಒದಗಿಸಲಾಗಿದ್ದು, ಆಹಾರ ಪದಾರ್ಥಗಳು ಮತ್ತು ಪಾತ್ರೆ ಮುಂತಾದವುಗಳಿಗೆ ಸುಮಾರು ೬.೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯ ಮುಧೋಳ್ ತಾಲೋಕಿನಲ್ಲಿ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿ, ಶ್ರೀ ದಯಾನಂದ ಪಾಟೀಲ್ ಅವರ ಸಹಯೋಗದೊಂದಿಗೆ ಸಂತ್ರಸ್ತರಿಗೆ ೧೫೦ ಮನೆಗಳನ್ನು ಕಟ್ಟಿಕೊಡಲು ತೀರ್ಮಾನಿಸಿದೆ. ಅದಲ್ಲದೆ, ಮುಂದಿನ ದಿನಗಳಲ್ಲಿ ವಿಪರೀತವಾಗಿ ಹಾನಿಗೊಳಗಾದ ಪ್ರದೇಶಗಳಲ್ಲಿ ಬೃಹತ್ ಸಂಖ್ಯೆಯಲ್ಲಿ ಮನೆಗಳನ್ನು ರಾಮಕೃಷ್ಣ ಮಿಷನ್ ವತಿಯಿಂದ ನಿರ್ಮಾಣ ಮಾಡಲು ಕೂಡ ನಿರ್ಧರಿಸಲಾಗಿದೆ. ಅದಕ್ಕಾಗಿ ಸಿದ್ಧತೆ ಭರದಿಂದ ಸಾಗುತ್ತಿದೆ.

## ಮನವಿ

**ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮವು ಪ್ರವಾಹ ಸಂತ್ರಸ್ತರಿಗಾಗಿ ಅಧಿಕ ಸಂಖ್ಯೆಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡುವ ಯೋಜನೆಯನ್ನು ಹಾಕಿಕೊಂಡಿದೆ. ಅದಕ್ಕಾಗಿ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಈ ಮಹಾನ್ ಕಾರ್ಯಕ್ಕಾಗಿ ಬೇಕಾಗುವ ಅಪಾರವಾದ ವೆಚ್ಚವನ್ನು ಭರಿಸಲು, 'ವಿವೇಕಪ್ರಭ' ದ ಎಲ್ಲ ಓದುಗರ, ಹಿತೈಷಿಗಳ ಉದಾರ ಧನಸಹಾಯ ಅತ್ಯವಶ್ಯಕವಾಗಿದೆ. ದಯವಿಟ್ಟು ನಿಮ್ಮ ದೇಣಿಗೆಯನ್ನು ಡಿ.ಡಿ. ಅಥವಾ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ:**

**ಶ್ರೀರಾಮಕೃಷ್ಣ ಮಿಷನ್ ಆಶ್ರಮ,<br>ಮಾನ್ ಸಿಂಗ್ ಥಾಪಾ ರೋಡ್, ಕೋಟೆ,<br>ಬೆಳಗಾವಿ – ೫೯೦ ೦೧೬**

## ಅನಾಹುತ



ಬಿಜಾಪುರ ಜಿಲ್ಲೆಯ ಆವೇರಿಯಲ್ಲಿ



ಗುಲ್ಬರ್ಗ ಜಿಲ್ಲೆಯ ಅಳಗಿಯಲ್ಲಿ

## ಪರಿಹಾರ ಕಾರ್ಯ



ಬಳ್ಳಾರಿ ಜಿಲ್ಲೆಯ ಮಾಟೂರಿನಲ್ಲಿ



ಕೊಪ್ಪಳ ಜಿಲ್ಲೆಯ ಮೂಡ್ಲಾಪುರದಲ್ಲಿ



ಕೊಪ್ಪಳ ಜಿಲ್ಲೆಯ ರಾಮಪುರದಲ್ಲಿ



ಗುಲ್ಬರ್ಗ ಜಿಲ್ಲೆಯ ಹಿಂಚಗೇರಾದಲ್ಲಿ